ಆರೋಗ್ಯಾಧಿಕಾರಿ ವಿರುದ್ಧ ತನಿಖೆಗೆ ಆದೇಶ

ಕೋಲಾರ,.ಜೂ1:ಕೋಲಾರಜಿಲ್ಲಾ ಎಸ್‌ಎನ್‌ಆರ್ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕಾಧಿಕಾರಿ ಡಾ.ಎಸ್.ಎನ್.ವಿಜಯ್ ಕುಮಾರ್ ಹಾಗೂ ಆಸ್ಪತ್ರೆಯ ಉಪ ಮುಖ್ಯಫಾರ್ಮಸಿ ಅಧಿಕಾರಿ ಮಹೇಶ್ ಬೇನಾಳ್ ವಿರುದ್ಧ ತನಿಖೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಮುಖ್ಯ ಆಡಳಿತಾಧಿಕಾರಿಗಳು ಆದೇಶಿಸಿದ್ದಾರೆ.

ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ವಿಭಾಗೀಯ ಸಹ ನಿರ್ದೇಶಕರು ಬೆಂಗಳೂರು ವಿಭಾಗ ಇವರಿಗೆ ತನಿಖೆಗೆ ಮೇ.27 ರಂದು ಸೂಚಿಸಿದ್ದಾರೆ.

ಕಳೆದ ಮಾರ್ಚ್ 5 ರಂದು ಜಿಲ್ಲಾಸ್ಪತ್ರೆಯಲ್ಲಿ ಹೆರಿಗೆ ದಾಖಲಾಗಿದ್ದ ಭವಾನಿ ಎಂಬ ಗರ್ಭಿಣಿಗೆ ಆಸ್ಪತ್ರೆಯಲ್ಲಿ ಅನುಮತಿ ಇಲ್ಲದ ಐಯರ್ ಆಂಟಿಬಯಟಿಕ್ ಚುಚ್ಚು ಮದ್ದು ನೀಡಿದ್ದು ಇದರಿಂದ ತೀವ್ರ ಆಸ್ವಸ್ಥಗೊಂಡ ಹಿನ್ನಲೆ ಭವಾನಿಯನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ ಈ ವೇಳೆ ಭವಾನಿ ನಿಧನ ಹೊಂದಿದ್ದು ಈ ಬಗ್ಗೆ ಭವಾನಿ ಪತಿ ಗೋಪಾಲ್ ದೂರು ನೀಡಿದ್ದರು.

ಆಗತಾನೆ ಹೆರಿಗೆಯಾದ ಮಹಿಳೆಗೆ ಈ ರೀತಿಯ ಐಯರ್ ಆಂಟಿಬಯಟಿಕ್ ಚುಚ್ಚು ಮದ್ದು ನೀಡಬಾರದೆಂಬ ಕಾನೂನು ಇದ್ದರು ನಿಯಮ ಬಾಹಿರವಾಗಿ ಆಸ್ಪತ್ರೆಯಲ್ಲಿ ಅನುಮತಿ ಇಲ್ಲದ ಚುಚ್ಚುಮದ್ದನ್ನು ಖರೀದಿಸಿ ಅದನ್ನು ಹೆರಿಗೆಯಾದವರಿಗೆ ನೀಡುವ ಮೂಲಕ ಭವಾನಿ ಸಾವಿಗೆ ಕಾರಣರಾಗಿದ್ದಾರೆ ಆ ಮೂಲಕ ಆಗ ತಾನೆ ಕಣ್ಣು ಬಿಟ್ಟು ಪ್ರಪಂಚವನ್ನು ನೋಡುವ ಮೊದಲೆ ಮಗುವನ್ನು ಅನಾಥಗೊಳಿಸಿದ್ದಾರೆಂದು ಗೋಪಾಲ್ ಅಳಲು ತೋಡಿಕೊಂಡಿದ್ದರು.

ಈ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕಾಧಿಕಾರಿ ಡಾ.ಎಸ್.ಎನ್.ವಿಜಯ್ ಕುಮಾರ್ ಹಾಗೂ ಆಸ್ಪತ್ರೆಯ ಉಪ ಮುಖ್ಯ ಫಾರ್ಮಸಿ ಅಧಿಕಾರಿ ಮಹೇಶ್ ಬೇನಾಳ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅಮಾನತ್ತುಗೊಳಿಸಬೇಕೆಂದು ಒತ್ತಾಯಿಸಿ ಗೋಪಾಲ್ ಮನವಿ ಮಾಡಿದ್ದರು. ಮನವಿ ಪುರಸ್ಕರಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಮುಖ್ಯ ಆಡಳಿತಾಧಿಕಾರಿಗಳು ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ನಿಯಮಾನುಸಾರವಾದ ವರದಿ ನೀಡುವಂತೆ ಸೂಚಿಸಿದ್ದಾರೆ.

ಅಪ್ರಾಪ್ತನ ವಿಚಾರಣೆಗೆ ಬಾಲ ಮಂಡಳಿಯ ಅನುಮತಿ

ಪುಣೆ,ಜೂ.1– ಐಶಾರಾಮಿ ಪೋರ್ಷ್ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ 17 ವರ್ಷದ ಚಾಲಕನ ಹೇಳಿಕೆ ದಾಖಲಿಸಲು ಪುಣೆ ಪೊಲೀಸರು ಬಾಲ ನ್ಯಾಯ ಮಂಡಳಿಯಿಂದ ಅನುಮತಿ ಪಡೆದಿದ್ದಾರೆ.

“ಬಾಲಕನ ಹೇಳಿಕೆಯನ್ನು ದಾಖಲಿಸಲು ವೀಕ್ಷಣಾಲಯಕ್ಕೆ ಭೇಟಿ ನೀಡುತ್ತೇವೆ” ಎಂದು ಅಪರಾಧ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಗಾಗಲೇ ಬಾಲಾಪರಾಧಿಯನ್ನು ಬಂಧಿಸಿ ರಿಮಾಂಡ್ ರೂಂನಲ್ಲಿ ಇರಿಸಲಾಗಿದೆ. ಈಗಾಗಲೇ ಮೇ 19 ರಂದು ಅವರ ಹೇಳಿಕೆಯನ್ನು ದಾಖಲಿಸಿದ್ದೇವೆ ಆದರೆ ಆ ಸಮಯದಲ್ಲಿ, ನಮ್ಮ ಕೈಯಲ್ಲಿ ಹೆಚ್ಚಿನ ಪುರಾವೆಗಳು ಇರಲಿಲ್ಲ. ಈಗ ಮತ್ತಷ್ಟು ಮಾಹಿತಿಯೊಂದಿಗೆ ಹೇಳಿಕೆ ದಾಖಲು ಮಾಡುವುದಾಗಿ ತಿಳಿಸಿದ್ದಾರೆ. ಕಾರು ಅಪಘಾತವಾದ ಸಮಯದಲ್ಲಿ ಯಾರೆಲ್ಲಾ ಇದ್ದರೂ ಎನ್ನುವುದೂ ಸೇರಿದಂತೆ ಹಲವು ಮಾಹಿತಿ ಕಲೆ ಹಾಕಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಿಲ್ಲಾ ರಕ್ಷಣಾಧಿಕಾರಿ ಮತ್ತು ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಹದಿಹರೆಯದವರ ಹೇಳಿಕೆಯನ್ನು ದಾಖಲಿಸಲಾಗುತ್ತದೆ.

ಹುಡುಗನ ತಾಯಿ ಅವರ ತಂದೆ ಮತ್ತು ಅಜ್ಜ ತಮ್ಮ ಕುಟುಂಬದ ಚಾಲಕನನ್ನು ಅಪಹರಿಸಿ ಮತ್ತು ಅಪಘಾತದವರೆಗೆ ಮಾಲೀಕತ್ವಕ್ಕೆ ಒತ್ತಾಯಿಸಲು ಪ್ರಯತ್ನಿಸಿದ ಎಂಬ ಆರೋಪದ ಮೇಲೆ ಬಂಧಿಸಲಾಗಿದೆ ಎಂದಿದ್ದಾರೆ.

ಕೆಪಿಟಿಸಿಎಲ್ ಸಿಬ್ಬಂದಿ ಸಸ್ಪೆಂಡ್

ತುಮಕೂರು,ಜೂ.1– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಿಬ್ಬಂದಿ ಪಾವಗಡದಲ್ಲಿ ಪರಸ್ಪರ ಹೊಡೆದಾಡಿದ್ದ ಘಟನೆಗೆ ಸಂಬಂಧಿಸಿದಂತೆ ಕಿರಿಯ ಇಂಜಿನಿಯರ್ (ವಿ) ವರದರಾಜು, ಮೆಕಾನಿಕ್ ಗ್ರೇಡ್–1 ನರಸಿಂಹಮೂರ್ತಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಹೊಡೆದಾಡಿದ್ದ ಸಿಬ್ಬಂದಿಯನ್ನು ಅಮಾನತಗೊಳಿಸಿ ತುಮಕೂರಿನ ಪ್ರಸರಣ ವೃತ್ತದ ಅಧೀಕ್ಷಕ ಇಂಜಿನಿಯರ್ ಅವರು ಆದೇಶ ಹೊರಡಿಸಿದ್ದಾರೆ ಎಂದು ಕೆಪಿಟಿಸಿಎಲ್ ಪ್ರಕಟಣೆ ತಿಳಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಟಿಸಿಎಲ್‌ನ ನೌಕರರಾದ ಕಿರಿಯ ಇಂಜಿನಿಯರ್ (ವಿ) ಶ್ರೀನಿವಾಸ್, ಎಸ್.ಎ ಗ್ರೇಡ್–2 ಸಂತೋಷ ಎಂಬುವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಪಾವಗಡದ ಪಟ್ಟಣದ ಹೊರವಲಯದ ತೋಟದಲ್ಲಿ ಮೇ 23 ರಂದು ಕಚೇರಿ ಸಮಯದಲ್ಲೇ ಸಿಬ್ಬಂದಿ ಕೈ ಕೈ ಮಿಲಾಯಿಸಿದ್ದರು. ಈ ಪ್ರಕರಣ ಸಂಬಂಧ ಕೆಪಿಟಿಸಿಎಲ್ ಶಿಸ್ತುಕ್ರಮ ಕೈಗೊಂಡಿದೆ.

ಅದ್ದೂರಿ ಮಾರಮ್ಮ ದೇವಿ ಕೊಂಡೋತ್ಸವ

ಚನ್ನಪಟ್ಟಣ.ಜೂ.1– ಪಟ್ಟಣದ ಇತಿಹಾಸ ಪ್ರಸಿದ್ಧ ಕೋಟೆ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವದ ಜೊತೆಗೆ ಶ್ರೀ ಮಾರಮ್ಮ ದೇವಿ ಕೊಂಡೋತ್ಸವ ಯಶಸ್ವಿಯಾಗಿ ಜರುಗಿತು.

ಕಳೆದ ಐದು ದಿನಗಳಿಂದ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ದೇವರ ಪೂಜಾ ಕುಣಿತ, ಮೆರವಣಿಗೆ ಸೇರಿದಂತೆ ಇತರೆ ಕಾರ್ಯಕ್ರಮಗಳು ನಡೆದಿದ್ದು, ಕೊಂಡಕ್ಕೆ ಅಗ್ನಿ ಸ್ಪಶ ಮಾಡಿ ಬಳಿಕ ಕೋಟೆಯ ಪ್ರಮುಖ ಬೀದಿಗಳಲ್ಲಿ ಅಮ್ಮನವರ ಮೆರವಣಿಗೆ ಮಾಡಲಾಯಿತು.

ಕೋಟೆಮಾರಮ್ಮ ದೇವಿಯ ಪೂಜಾ ಕುಣಿತ ಹೊತ್ತ ದೇವಸ್ಥಾನದ ಅರ್ಚಕರು ಕೊಂಡ ಹಾಯುವ ಮೂಲಕ ಯಾವುದೇ ವಿಘ್ನ ಇಲ್ಲದೆ ಕೊಂಡೋತ್ಸವ ಅದ್ದೂರಿಯಾಗಿ ಯಶಸ್ವಿಯಾಗಿ ಮುಕ್ತಾಯವಾಯಿತು.

ಸಿಡಿ ಕಾರ್ಯಕ್ರಮ ನಡೆಯಿತು. ದೇವಿಗೆ ಹರಕೆ ಹೊತ್ತ ಭಕ್ತರು ಮಕ್ಕಳಿಗೆ ಸಿಡಿ ಆಡಿಸುವ ಮೂಲಕ ಹರಕೆಯನ್ನು ತೀರಿಸಿದರು. ಬಳಿಕ ಕೋಟೆ ಮಾರಮ್ಮ, ಸಿಡಿರಣ್ಣ, ಮತ್ತು ವೀರಗಾಸೆ ಕುಣಿತ ನಡೆಯಿತು.

ಜನಸಾಗರ: ಕೋಟೆ ಮಾರಮ್ಮ ದೇವಿ ಜಾತ್ರಾ ಮಹೋತ್ಸದ ಪ್ರಯುಕ್ತ ಕೊಂಡ, ಸಿಡಿಯ ಜೊತೆಗೆ ಜಾತ್ರೆಯನ್ನು ನೋಡಲೆಂದೆ ಸಾವಿರಾರು ಭಕ್ತರು ಆಗಮಿಸಿದ್ದರು.

ಅಲ್ಲದೆ ಜಾತ್ರೆಯ ಪ್ರಯುಕ್ತ ಮಕ್ಕಳಿಗೆ ಮನರಂಜನೆ ನೀಡುವ ತೊಟ್ಟಿಲು, ವಿಮಾನ, ದೋಣಿ ಸೇರಿದಂತೆ ಆಟೋಪಕರಣಗಳನ್ನು ಅಳವಡಿಸುವ ಜೊತೆಗೆ ಮನೆಗಳಿಗೆ ಅಲಂಕಾರಿಕ ವಸ್ತುಗಳ ಮಾರಾಟ ಹಾಗೂ ಮಕ್ಕಳಿಗೆ ಆಟಿಕೆಗಳನ್ನು ಮಾರಾಟ ಮಾಡುವವರು ಸಹ ಇದ್ದರಿಂದ ಮಕ್ಕಳು, ಹಿರಿಯರು ಎನ್ನದೆ ಸಾವಿರಾರು ಮಂದಿ ಜಾತ್ರೆಯಲ್ಲಿ ಭಾಗವಹಿಸಿದ್ದರು.

ವಿಶೇಷ ವಿವಾಹ ಕಾಯ್ದೆ ಅರ್ಜಿ ಸಲ್ಲಿಕೆ ತಡೆಯಿಲ್ಲ

ಅಲಹಾಬಾದ್, ಜೂ.1– ಅಂತರ್ಧರ್ಮೀಯ ದಂಪತಿಗಳು ತಮ್ಮ ಧರ್ಮವನ್ನು ಪರಿವರ್ತಿಸುವ ಅಗತ್ಯವಿಲ್ಲದೇ ವಿಶೇಷ ವಿವಾಹ ಕಾಯ್ದೆಯಡಿ ನ್ಯಾಯಾಲಯದ ವಿವಾಹಕ್ಕೆ ಅರ್ಜಿ ಸಲ್ಲಿಸುವುದನ್ನು ಕಾನೂನು ತಡೆಯುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಇತ್ತೀಚೆಗೆ ಹೇಳಿದೆ. ನ್ಯಾಯಮೂರ್ತಿ ಜ್ಯೋತ್ಸ್ನಾ ಶರ್ಮಾ ನೇತೃತ್ವದ ಹೈಕೋರ್ಟ್ ಪೀಠವು ತಮ್ಮ ಜೀವನ, ಸ್ವಾತಂತ್ರ್ಯ ಮತ್ತು ಗೌಪ್ಯತೆಗೆ ಹಸ್ತಕ್ಷೇಪ ಮಾಡದಂತೆ ವಿರೋಧ ಪಕ್ಷಗಳನ್ನು ನಿರ್ಬಂಧಿಸಲು ನಿರ್ದೇಶನವನ್ನು ಕೋರಿ ನ್ಯಾಯಾಲಯದ ಮೆಟ್ಟಿಲೇರಿದ ದಂಪತಿಯನ್ನು ರಕ್ಷಿಸುವ ಸಂದರ್ಭದಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಪರಸ್ಪರರ ಧರ್ಮಕ್ಕೆ ಮತಾಂತರಗೊಳ್ಳದೆ, ಅವರು ಪತಿ–ಪತ್ನಿಯಾಗಿ ಒಟ್ಟಿಗೆ ವಾಸಿಸಲು ನಿರ್ಧರಿಸಿದ್ದಾರೆ ಮತ್ತು ವಿಶೇಷ ವಿವಾಹ ಕಾಯ್ದೆಯಡಿ ಶೀಘ್ರದಲ್ಲೇ ಮದುವೆಯಾಗಲು ನಿರ್ಧರಿಸಿದ್ದಾರೆ ಎಂದು ಅರ್ಜಿದಾರರು ನ್ಯಾಯಾಲಯಕ್ಕೆ ತಿಳಿಸಿದರು. ವರದಕ್ಷಿಣೆಯ ಸುಳ್ಳು ಆರೋಪಗಳನ್ನು ತಡೆಗಟ್ಟಲು ವಧು ಮತ್ತು ವರರು ಮದುವೆಯ ಸಮಯದಲ್ಲಿ ಪಡೆದ ಉಡುಗೊರೆಗಳ ಪಟ್ಟಿಯನ್ನು ನಿರ್ವಹಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ಕಾಂಗ್ರೆಸ್‌ನತ್ತ ನಾರಾಯಣ ಸ್ವಾಮಿ ಬೆಂಬಲಿಗರು

ಕೋಲಾರ,ಜೂ. 1– ಈ ಭಾರಿಯ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ಹಲವು ಒಳ ಮುಖಗಳ ಅನಾವರಣಕ್ಕೆ ವೇದಿಕೆಯಾಗಿದೆ. ಕೋಲಾರ ಜಿಲ್ಲೆ ಖಾಸಗಿ ಶಿಕ್ಷಣ ಸಂಸ್ಥೆಗಳು ಹೊಸ ಮುಖಕ್ಕೆ ಮಣೆ ಹಾಕಿದರೆ ಮತ್ತೊಂದಡೆ ಹಾಲಿ ಎಂಎಲ್ಸಿ ವೈ.ಎ.ನಾರಾಯಣಸ್ವಾಮಿ ಬೆಂಬಲಿಗರು ಕಾಂಗ್ರೆಸ್ ನತ್ತ ಮುಖ ಮಾಡಿದ್ದಾರೆ.

ಜೂನ್ 3 ರಂದು ನಡೆಯಲಿರುವ ಚುನಾವಣೆಯಲ್ಲಿ ನಿರಂತರವಾಗಿ ಗೆದ್ದು ಬರುತ್ತಿರುವ ವೈ.ಎ.ನಾರಾಯಣಸ್ವಾಮಿಗೆ ತವರು ಜಿಲ್ಲೆಯಲ್ಲೇ ಭಾರಿ ಹಿನ್ನಡೆಯಾಗುವ ಸಾಧ್ಯತೆಗಳಿವೆ. ಜೆಡಿಎಸ್ ನೊಂದಿಗಿನ ಮೈತ್ರಿ ಅಂಶ ಬಿಟ್ಟರೇ ಉಳಿದಂತೆ ಯಾವುದೇ ರೀತಿಯ ಪೂರಕ ವಾತಾವರಣವಿಲ್ಲ.

ಖಾಸಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಯವರು ಪಕ್ಷೇತರ ಅಭ್ಯಥಿ9 ವಿನೋದ್ ಶಿವರಾಜ್ ಬೆನ್ನಿಗೆ ನಿಂತಿದ್ದರೆ ಇತ್ತ ವೈ.ಎ.ನಾರಾಯಣಸ್ವಾಮಿ ಅಂಗಳದಲ್ಲಿದ್ದ ಉದಯಕುಮಾರ್ ಬಣ ದಿಕ್ಕು ಬದಲಿಸಿದಂತಿದೆ.

ಇತ್ತೀಚೆಗೆ ಕೋಲಾರ ನಗರದ ಹೊರವಲಯದ ಟೇಕಲ್ ರಸ್ತೆಯ ಖಾಸಗಿ ಕಾಲೇಜಿನಲ್ಲಿ ಶಾಸಕ ಕೊತ್ತೂರು ಮಂಜುನಾಥ್ ಹಾಗೂ ಎಂಎಲ್ಸಿ ಅನಿಲ್ ಕುಮಾರ್ ಪ್ರಚಾರ ಕಾಯ9ದಲ್ಲಿ ಭಾಗಿಯಾಗಿದ್ದಾಗ ಕಾಂಗ್ರೆಸ್ ಪಕ್ಷವನ್ನು ಉದಯಕುಮಾರ್ ಹಾಡಿ ಹೊಗಳಿ ಇಂತಹ ಪಕ್ಷ ಬರಬೇಕಿತ್ತು ಎಂದು ತಮ್ಮ ದಿಕ್ಕು ಬದಲಿಸಿದ್ದಾರೆ.

ಶಾಸಕರುಗಳ ಆಗಮನಕ್ಕೆ ಹಷೋ9ದ್ಗಾರ ಬೀರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಚುನಾವಣೆ ನಂತರ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದಡಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ನಾನು ಸಿಂಡಿಕೇಟ್ ಮೆಂಬರ್ ಆಗಿದ್ದು ಸಿದ್ದರಾಮಯ್ಯರಿಂದ ಎಂದು ತಮ್ಮ ಕಂಠ ಧ್ವನಿಯಲ್ಲಿ ಹಾಡಿ ಹೊಗಳಿದ್ದಾರೆ.

ಶಿಕ್ಷಣ ಕ್ಷೇತ್ರದ ಸದಸ್ಯ ಸ್ಥಾನ ಬಹುಮುಖ್ಯ, ರಾಷ್ಟ್ರೀಯ ಶಿಕ್ಷಣ ನೀತಿ ಗ್ರಾಮಾಂತರ ಭಾಗದಲ್ಲಿ ಭಾರಿ ಹೊಡೆತ ಬರಲಿದ್ದು, ರಾಜ್ಯದಲ್ಲಿ ಅದರ ಬದಲಾವಣೆ ಆಗಿರುವುದು ಒಳ್ಳೆಯದ್ದು, ಉತ್ತಮ ತೀಮಾ9ನ ರಾಜ್ಯ ಸಕಾ9ರದ್ದಾಗಿದೆ ಎಂದಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಕಾರ್ಪೋರೇಟ್ ಗೆ ಅದು ಸಹಕಾರಿ ಅದನ್ನು ಕಾಂಗ್ರೆಸ್ ಪಕ್ಷ ದಿಟ್ಟ ತೀಮಾ9ನದಿಂದ ದಿಕ್ಕರಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ನಿಮ್ಮ ಮಾಗ9ದಶ9ನ ಬಹಳ ಸಂತಸ ನಿಮ್ಮಿಂದ ಕಲಿಯುವುದು ಹೆಚ್ಚಿದೆ ಎಂದು ಕಾಂಗ್ರೆಸ್ ಶಾಸಕರಿಗೆ ಹುಗೇ ಹುಗೇ ಎಂದು ಶರಣಾಗಿದ್ದಾರೆ. ಆ ಮೂಲಕ ಎಂಎಲ್ಸಿ ವೈ.ಎ.ನಾರಾಯಣಸ್ವಾಮಿ ವಿರುದ್ಧದ ಮನದಾಳ ಹೊರಬಿದ್ದಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **RISHIKA KAVERAPPA** W/o Sri Kaverappa M.R, aged about 45years, R/at No.202, 2nd floor, J.C.Serene Apartments Challaghatta, Bangalore-560037. I state that my name has to be rectified from RUSHIKA to RISHIKA KAVERAPPA. Vide Affidavit dated 01.06.2024 Sworn before notary GANGARAJU.B.N, Bangalore.

AFFIDAVIT

We, **MOHAMED GANI** and **ZUBEEDA BEGUM,** both are R/at No. 14/103, 1st floor, M.M.Plaza, Dr. T.C.M.Royan Road, Jolly Mohalla, Bangalore-560053, do hereby state that we futher declare that 2nd Declarant gave birth to a male child on 15.05.2015 at KIMS Hospital Bangalore and named **MOHAMED ZIDAN.** We State and affirm that in our son's birth certificate issued by Govenment of Karnataka, Chief Registrar of births and deaths reigstration No.CHI/B/2015 /00592/001199, date of reg:21.05.2015. and our son's name has been mentioed as **M.MOHAMMED ZIDAN** instead of **MOHAMED ZIDAN** which is our son's correct name. We declare that our son's birth certificate his parent name has been mentioned as **A.MOHAMMED GANI & ZUBEEDHA BEGUM.M** instead of **Mohamed Gani & Zubeeda Begum** Which is his Parent Correct Name as per aadhaar card & other documents. Vide affidavit dated 05.04.2024. Sworn before **Notary Fahim Unnisa**, Bengaluru.

ಕಳೆದು ಹೋಗಿದೆ

ಡಾ. ಬಿ. ದೊಡ್ಡಬಸಪ್ಪ ಆದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ ನಾನು ಮೆಜೆಸ್ಟಿಕ್‌ನಿಂದ ವಿದ್ಯಾರಣ್ಯಪುರಕ್ಕೆ ಬಸ್‌ನಲ್ಲಿ ಬರುವಾಗ ನನಗೆ ಸೇರಿದ ಮೂಲ ದಾಖಲಾತಿಗಳಾದ 1. ಎಸ್.ಎಸ್. ಎಲ್.ಸಿ. ಅಂಕಪಟ್ಟಿ, 2. ಎಂ.ಎಸ್ಸಿ ಮತ್ತು ಪಿ.ಹೆಚ್.ಡಿ. ಅಂಕಪಟ್ಟಿಗಳು ಕಳೆದು ಹೋಗಿರುತ್ತವೆ. ಈ ಮೂಲ ದಾಖಲಾತಿ ಪತ್ರಗಳು ಯಾರಿಗಾದರೂ ಸಿಕ್ಕಿದಲ್ಲಿ ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕೆಂದು ಕೋರುತ್ತೇನೆ.

ಪೊಲೀಸ್ ಕಂಪ್ಲೈಂಟ್ ನಂ.
PO 0015240600365
ದಿನಾಂಕ: 22.05.2024

ವಿಳಾಸ:
ಡಾ. ಬಿ. ದೊಡ್ಡಬಸಪ್ಪ
ಬಿನ್ ಓಂಕಾರಪ್ಪ
ನಂ. 49, 13ನೇ ಕ್ರಾಸ್,
ಸರ್. ಎಂ.ವಿ.ಲೇಔಟ್,
ವಿರೂಪಾಕ್ಷಪುರ, ತಿಂಡ್ಲುಮುಖ್ಯರಸ್ತೆ,
ವಿದ್ಯಾರಣ್ಯಪುರ, ಬೆಂಗಳೂರು.
Mob : 77950 72699

ಕಾಂಗ್ರೆಸ್ ಗೆದ್ದರೆ ಸಮಸ್ಯೆಗೆ ಪರಿಹಾರ ಸಾಧ್ಯ



ಕೋಲಾರ,ಜೂ. 1– ಆಗ್ನೇಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಏನಾದರೂ ವಿರೋಧ ಪಕ್ಷದವರನ್ನು ಆಯ್ಕೆ ಮಾಡಿದರೆ ಅವರು ಮೇಲ್ಮನೆಯಲ್ಲಿ ಸುಮ್ಮನೆ ಬಂದು ಗಲಾಟೆ ಮಾಡಕ್ಕೆ ಸೀಮಿತ ಹೊರತು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದನೆ ಇರುವುದಿಲ್ಲ ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು

ತಾಲೂಕಿನ ಗ್ರಾಮಾಂತರ ಭಾಗದ ಶಾಲೆಗಳಲ್ಲಿ ಗುರುವಾರ ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ ಶ್ರೀನಿವಾಸ್ ಪರವಾಗಿ ಪ್ರಚಾರ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಹಿಂದೆ 2013 ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದಿಂದ ಸರ್ಕಾರಿ ನೌಕರರ 6 ನೇ ವೇತನ ಆಯೋಗ ವರದಿಯನ್ನು ಜಾರಿ ಮಾಡಿದ್ದು ಅದೇ ರೀತಿಯಲ್ಲಿ ಏಳನೇ ವೇತನ ಆಯೋಗ ವರದಿ ಕೂಡ ಜಾರಿ ಮಾಡಲಿದೆ ನುಡಿದಂತೆ ನಡೆಯುವ ಸರಕಾರ ಏನಾದರೂ ಇದ್ದರೆ ಅದು ಕಾಂಗ್ರೆಸ್ ಸರಕಾರ ಅದಕ್ಕಾಗಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಆಯ್ಕೆ ಮಾಡಿ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು

ಈ ಸಂದರ್ಭದಲ್ಲಿ ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್ ಮಾತನಾಡಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಎಂದು ಮನವಿ ಮಾಡಿದರು.

ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಪ್ರಜ್ಞಾವಂತ ಮತದಾರರು ಬಿಜೆಪಿಗೆ ತಕ್ಕಪಾಠ ಕಲಿಸಿ ಕಾಂಗ್ರೆಸ್ ಆಡಳಿತ ನಡೆಸಲು 136 ಸ್ಥಾನಗಳೊಂದಿಗೆ ಸ್ಪಷ್ಟ ಬಹುಮತ ನೀಡಿದರು. ಇದರಿಂದ ಜನಸಾಮಾನ್ಯರ ಕಷ್ಟಗಳನ್ನು ಪರಿಹರಿಸಲು ಪಣತೊಟ್ಟಿರುವ ಪಕ್ಷವು ಕಾಂಗ್ರೆಸ್ ಆಗಿದ್ದು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಕೂಡ ಬದ್ಧವಾಗಿದೆ ಶಿಕ್ಷಕರು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಬಂಗಾರಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೀಸಂದ್ರ ಗೋಪಾಲಗೌಡ, ವಕ್ಕಲೇರಿ ಗ್ರಾಪಂ ಮಾಜಿ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ಮುಖಂಡರಾದ ಖಾಜಿಕಲ್ಲಹಳ್ಳಿ ಮುನಿರಾಜು, ಎಂಟಿಬಿ ಶ್ರೀನಿವಾಸ್, ಕ್ಯಾಲನೂರು ಅನಿಲ್, ನವೀನ್, ಅಮ್ಮನಲ್ಲೂರು ನಾಗೇಶ್, ಭೂಪತಿಗೌಡ, ಮಂಜುನಾಥ್, ಸೀರಾಜ್, ರವಿ, ಸೇರಿದಂತೆ ಶಿಕ್ಷಕರು ಇದ್ದರು

ಜ್ವಲಂತ ಸಮಸ್ಯೆಗಳ ನಿವಾರಣೆಗೆ ವೈಎನ್ ಗೆಲುವು ಅತ್ಯಗತ್ಯ

ಕೋಲಾರ,ಜೂ.1–ಶಿಕ್ಷಣ ಕ್ಷೇತ್ರದ ಜ್ವಲಂತ ಸಮಸ್ಯೆಗಳ ನಿವಾರಣೆಗೆ ನಿರಂತರವಾಗಿ ಶ್ರಮಿಸುತ್ತಾ ಬಂದಿರುವ ಡಾ.ವೈ.ಎ.ನಾರಾಯಣಸ್ವಾಮಿರನ್ನು ವಿಧಾನಪರಿಷತ್‌ಗೆ ಮರು ಆಯ್ಕೆ ಮಾಡುವ ಮೂಲಕ ಸದನದಲ್ಲಿ ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಧ್ವನಿ ಬಲಗೊಳ್ಳಲು ಸಹಕರಿಸಿ ಎಂದು ಉಪನ್ಯಾಸಕರು ಹಾಗೂ ಶಿಕ್ಷಕರಿಗೆ ಸಹ್ಯಾದ್ರಿ ಕಾಲೇಜಿನ ಆಡಳಿತಾಧಿಕಾರಿ ಉದಯಕುಮಾರ್ ಹಾಗೂ ವೈಎನ್ ಸಹೋದರ ವೀರಭದ್ರಪ್ಪ ಮನವಿ ಮಾಡಿದರು.

ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಡಾ.ವೈ.ಎ.ನಾರಾಯಣಸ್ವಾಮಿ ಪರ ಮತಯಾಚನೆ ನಡೆಸಿದ ಉದಯಕುಮಾರ್ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರದಲ್ಲಿನ ಪ್ರಾಥಮಿಕ ಹಂತದಿಂದ ಪದವಿ, ತಾಂತ್ರಿಕ ಶಿಕ್ಷಣದ ಹಂತಗಳವರೆಗೂ ಇರುವ ಸಮಸ್ಯೆಗಳ ಕುರಿತು ವೈಎನ್ ಅವರಿಗೆ ಅಪಾರ ಮಾಹಿತಿ ಇದ್ದು, ಪ್ರತಿ ಸಮಸ್ಯೆ ನಿವಾರಣೆಗೆ ಸರ್ಕಾರದ ವಿರುದ್ಧ ಸದನದಲ್ಲಿ ಪ್ರಬಲವಾಗಿ ಧ್ವನಿಯೆತ್ತುವ ಶಕ್ತಿ, ವಾಕ್‌ಚಾತುರ್ಯ ಹೊಂದಿದ್ದಾರೆ ಎಂದರು. ವೈಎನ್ ಸಹೋದರ ವೀರಭದ್ರಪ್ಪ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಸೇರಿದಂತೆ ಗೊಂದಲದ ಗೂಡಾಗಿರುವ ಶಿಕ್ಷಣ ವ್ಯವಸ್ಥೆ ಸರಿಪಡಿಸುವ ನಿಟ್ಟಿನಲ್ಲಿ ಡಾ.ವೈ.ಎ.ನಾರಾಯಣಸ್ವಾಮಿ ಅಂತಹವರ ಆಯ್ಕೆ ಅತಿ ಮುಖ್ಯವಾಗಿದೆ, ಈ ನಿಟ್ಟಿನಲ್ಲಿ ಶಿಕ್ಷಕರು, ಉಪನ್ಯಾಸಕ ಮತದಾರರು ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಸದಾ ಶಿಕ್ಷಕರ ಕುರಿತು ಚಿಂತಿಸುವ ವೈಎನ್, ಶಿಕ್ಷಕರನ್ನು ತಮ್ಮ ಕುಟುಂಬದವರೇ ಎಂದು ಭಾವಿಸಿ ಕೆಲಸ ಮಾಡುತ್ತಿದ್ದಾರೆ, ಸಮಸ್ಯೆ ಹೊತ್ತು ಬರುವ ಶಿಕ್ಷಕರಿಗೆ ನಿರಾಸೆಯಾಗದಂತೆ ಅವರ ಬೆನ್ನಿಗೆ ನಿಂತು ಕೆಲಸ ಮಾಡಿಕೊಡುವ ಹೃದಯವಂತಿಕೆ ಅವರದ್ದು ಎಂದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಗಂಗಾಧರರಾವ್ ಸೇರಿದಂತೆ ಮಹಿಳಾ ಕಾಲೇಜಿನ ಉಪನ್ಯಾಸಕರು, ವೈಎನ್ ಬೆಂಬಲಿಗರು, ವಿವಿಧ ಶಿಕ್ಷಕ, ಉಪನ್ಯಾಸಕ ಸಂಘಟನೆಗಳ ಮುಖಂಡರು ಹಾಜರಿದ್ದು ಮತಯಾಚಿಸಿದರು.

ಮತ ಎಣಿಕೆ ಕೇಂದ್ರದ ಪ್ರತಿಬಂಧಕಾಜ್ಞೆ ಜಾರಿ

ಕೋಲಾರ, ಜೂ,1–ಕೋಲಾರ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಲೋಕಸಭಾ ಸಾರ್ವತ್ರಿಕ ಚುಣಾವಣೆ ಏಪ್ರಿಲ್ 26 ರಂದು ಜರುಗಿದ್ದು, ಜೂ.4 ರಂದು ಮತ ಎಣಿಕೆ ಜರುಗುವ ಹಿನ್ನೆಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವ್ಯಾಪ್ತಿಯ 100 ಮೀಟರ್ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆ ಜಾರಿಗೊಳಿಸಿ, ಜಿಲ್ಲಾ ದಂಡಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಅಕ್ರಂ ಪಾಷ ಆದೇಶಿಸಿದ್ದಾರೆ.

ಜೂನ್ 4 ರಂದು ಮತ ಎಣಿಕೆ ಇರುವುದರಿಂದ ನಗರದ ಪ್ರಥಮ ದರ್ಜೆ ಕಾಲೇಜು ಮತ ಎಣಿಕೆ ಕೇಂದ್ರದ ವ್ಯಾಪ್ತಿಯ 100 ಮೀಟರ್ ಸುತ್ತಮುತ್ತಲಿನ ಪ್ರದೇಶದಲ್ಲಿ ಜೂನ್ 3ರ ಸಂಜೆ 6.00 ಗಂಟೆಯಿಂದ ಜೂನ್ 4ರ ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಹಾಗೂ ಜೂ 05ರ ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ, ಜಿಲ್ಲಾ ದಂಡಾಧಿಕಾರಿ ಜಿಲ್ಲಾಧಿಕಾರಿ ಅಕ್ರಂ ಪಾಷ ಆದೇಶಿಸಿದ್ದಾರೆ.

ಮತ ಎಣಿಕೆಯ ದಿನದಂದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆಯಾಗಿ ಮತ್ತು ಮತದಾನದ ಪಾವಿತ್ರ್ಯತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಸಿ.ಆರ್.ಪಿ.ಸಿ 1973 ರ ಕಲಂ 144 ಮತ್ತು ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 35 ರ ಮೇರೆಗೆ ಪ್ರತಿಬಂಧಕಾಜ್ಞೆ ವಿಧಿಸಲಾಗಿದೆ, ಈ ಅವಧಿಯಲ್ಲಿ ಪ್ರತಿಬಂಧಕಾಜ್ಞೆ ಜಾರಿಯಿರುವ ಪ್ರದೇಶದಲ್ಲಿ ಮೇರವಣಿಗೆ ಅಥವಾ ಐದಕ್ಕಿಂತ ಹೆಚ್ಚು ಜನರು ಗುಂಪು ಸೇರುವುದನ್ನು ನಿಷೇಧಿಸಲಾಗಿದೆ. ಶಸ್ತ್ರ, ಬಡಿಗೆ, ಭರ್ಜಿ, ಖಡ್ಗ, ಗಧೆ, ಬಂದೂಕು, ಚೂರಿ, ಲಾಠಿ, ದೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯ ಮಾಡತಕ್ಕ ಯಾವುದೇ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ.

ಕಲ್ಲುಗಳನ್ನು ಇಲ್ಲವೇ ಸ್ಫೋಟಕ ವಸ್ತುಗಳನ್ನು ಇತರ ಯಾವುದೇ ಅಂತಹ ವಸ್ತುಗಳನ್ನು ನಿಷೇಧಿತ ಸ್ಥಳಕ್ಕೆ ತೆಗೆದುಕೊಂಡು ಹೋಗುವುದನ್ನು ಹಾಗೂ ಸಂಗ್ರಹ ಮಾಡುವುದನ್ನು ನಿಷೇಧಿಸಲಾಗಿದೆ. ಕಲ್ಲುಗಳನ್ನು ಎಸೆಯುವ ಸಾಧನಗಳನ್ನು ಅಥವಾ ಅಂತಹ ಪರಿಕರಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ.

ಮತ ಎಣಿಕೆ ಕೇಂದ್ರದ ಸುತ್ತ 100 ಮೀ ವ್ಯಾಪ್ತಿಯಲ್ಲಿ ಬಹಿರಂಗವಾಗಿ ಘೋಷಣೆ ಮಾಡುವುದು, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಕ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರರ್ದಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ನಿರ್ಭಧಿಸಲಾಗಿದೆ. ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಡುವುದು ಹಾಗೂ ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿಗಳು, ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ ಹಾಗೂ ಸಾರ್ವಜನಿಕರ ಗಾಂಭೀರ್ಯ ಹಾಗೂ ನೈತಿಕತೆಗೆ ಭಂಗ ತರುವಂತಹ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಕೃತ್ಯಗಳಲ್ಲಿ ತೊಡಗಿರುವುದನ್ನು ನಿರ್ಭಂಧಿಸಲಾಗಿದೆ. ಯಾವುದೇ ವ್ಯಕ್ತಿ ಸಾರ್ವಜನಿಕವಾಗಿ ಮೇಲೆ ವಿವರಿಸಿದ ಮಾರಕಾಸ್ತ್ರಗಳು, ಸ್ಫೋಟಕ ವಸ್ತುಗಳು, ವಿನಾಷಕಾರಿ ವಸ್ತುಗಳು ಹಾಗೂ ಇತರ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದು, ಕಂಡುಬಂದ ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಯಾವುದೇ ಪೊಲೀಸ್ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ. ಅಂತಹ ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು. ಅಲ್ಲದೇ ಸಂಬಂಧಿಸಿದ ವ್ಯಕ್ತಿಗಳ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು. ಈ ಮೇಲಿನ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 188ರ ಪ್ರಕಾರ ಕ್ರಮವನ್ನು ಜರುಗಿಸಲಾಗುವುದು ಎಂದು ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಅಕ್ರಂ ಪಾಷ ಅವರು ನಿಷೇಧಾಜ್ಞೆ ಆದೇಶದಲ್ಲಿ ತಿಳಿಸಿದ್ದಾರೆ.

PUBLIC NOTICE

It is hereby notified that my clients have agreed to purchase the Schedule Property from its Owners, namely, **Sri.HARISH JAYANTILAL MOMAYA** S/o Sri.Jayantilal Momaya and his wife **Smt.MEENA HARISH MOMAYA,** residing at Flat No.A-902, Raheja Residency, Plot No.24/26, Near M.G.Complex, Sector-14, Vashi, Thane, Navi Mumbai, Maharashtra-400703.

Apart from the said Owners, if any other person/s have any manner of right, title and or interest or claim or charge or lien over the Schedule property or otherwise have any lawful objection/s for sale of the Schedule Property by the aforesaid Owners, they are hereby called upon to file their objection/s in writing, along with the photocopies of documents on which they rely, with the undersigned, within 14 days from the date of publication of this notice. Objection/s received thereafter will not be binding on my clients.

SCHEDULE

All that piece and parcel of the Commercial property bearing Municipal No.28, PID No.30-2-28, measuring East to West 17¾ ft and North to South 68 ft, in all measuring 1207 Sq.ft., with a building thereon, situated at Old Tharagupet, Bangalore and bounded on:

East by : Property No.27
West by : Shop of Singam Rangaswamappa
North by : Old Tharagupet Road
South by : Municipal open land (Cart-Stand)

Sd/- **S.F. GOUTAM CHAND**
Advocate
GOUTAM ASSOCIATES
No.60, 2nd Floor, Kanakapura Road,
Basavanagudi, Bangalore-560 004.

B&B TRIPLEWALL CONTAINERS LIMITED |CIN: L21015KA2011PLC060106
Reg Off: Sy. No. 263/2/3, Marsur Madiwal Village, Kasaba Hobli, Anekal Taluk, Bangalore – 562106
Website: www.boxandboard.in|E-mail ID.: info@boxandboard.in| Cont.: 8870213555

Extract of Financial Results for the Quarter & Year ended on 31st March, 2024

(Rs. in Lacs, except as stated otherwise)

Particulars	Standalone Financial Result					Consolidated Financial Result				
	Quarter ended	Quarter ended	Quarter ended	Year ended	Year ended	Quarter ended	Quarter ended	Quarter ended	Year ended	Year ended
	31st March, 2024 (audited)	31st Dec, 2023 (Unaudited)	31st March, 2023 (audited)	31st March, 2024 (audited)	31st March, 2023 (audited)	31st March, 2024 (audited)	31st Dec, 2023 (Unaudited)	31st March, 2023 (audited)	31st March, 2024 (audited)	31st March, 2023 (audited)
Total income from operations (net)	10141.62	9156.60	8058.46	37451.51	33684.36	10287.05	9155.80	8028.54	37539.43	33654.44
Net Profit / (Loss) for the period (before Tax, Exceptional and/or Extraordinary items)	606.39	603.21	732.78	2585.55	2404.31	531.07	495.72	732.18	2307.65	2403.7
Net Profit / (Loss) for the period before tax (after Exceptional and/or Extraordinary items)	606.39	603.21	732.78	2585.55	2404.31	531.07	495.72	732.18	2307.65	2403.7
Net Profit / (Loss) for the period after tax (after Exceptional and/or Extraordinary items)	453.54	446.99	556.94	1920.29	1792.82	374.82	359.82	556.49	1689.98	1792.3
Total comprehensive income for the period (comprising profit for the period after tax and other comprehensive income after tax	446.79	446.99	562.84	1913.54	1798.72	368.07	359.82	562.39	1683.23	1798.2
Equity Share Capital	2051.12	2051.12	2051.12	2051.12	2051.12	2051.12	2051.12	2051.12	2051.12	2051.12
Other equity	10074.06	9664.53	8365.63	10074.06	8365.63	9912.55	9558.15	8365.36	9912.55	8365.36
Earnings Per Share (annualised) (face value of 10/- each)										
Basic:	8.84	8.72	10.86	9.36	8.74	7.64	7.49	10.97	8.54	8.77
Diluted:	8.84	8.72	10.86	9.36	8.74	7.64	7.49	10.97	8.54	8.77
Debt Service Coverage ratio	0.19	0.21	0.31	0.18	0.26	0.18	0.22	0.29	0.17	0.24
Interest Service Coverage ratio	4.64	4.95	5.47	5.32	4.84	3.73	3.74	5.46	4.38	4.84
Debt to Equity Ratio	1.48	1.37	1.18	1.48	1.18	1.58	1.47	1.26	1.58	1.26

Note: -

1. The above is the extract of detail financial Result submitted to NSE under regulation 33 of SEBI (LODR) Reg, 2015. The full financial Result along with notes is available on Company website www.boxandboard.in, on NSE website www.nseindia.in and on BSE website www.bseindia.com.

2. Financial Result have been prepared accordance to Companies (Indian Accounting Standards) Rules, 2015 prescribed under section 133 of Companies Act, 2013. The figures for the previous period have been restated, regrouped and reclassified wherever required to company with the requirement of IndAS.

By Order of the Board of Directors
For, B&B Triplewall Containers Limited
Sd/-
Manish Kumar Gupta
Managing Director